

ಚೈತ್ರಾ ಆಚಾರ್ಯ; ಭರವಸೆಯ ನಾಯಕಿ ದೊರಕಿಸಿಕೊಟ್ಟ 'ಸಪ್ತ ಸಾಗರದಾಚೆ ಎಲ್ಲೋ – ಸೈಡ್ ಬಿ'



ಒಟಿಟಿ ಎಂಬ ಎರಡೂ ಊರುಗೋಲುಗಳನ್ನು ನೆಚ್ಚಿಕೊಳ್ಳದ ಸ್ಥಿತಿಯೂ ಚಿತ್ರೋದ್ಯಮದ ಹೆಳವತನಕ್ಕೆ ಕಾರಣವಾಗಿದೆ.

ಮಲ್ಟಿಪ್ಲೆಕ್ಸ್‌ಗಳಲ್ಲಿ ಕನ್ನಡ ಸಿನಿಮಾಗಳನ್ನು ಮಲತಾಯಿ ಧೋರಣೆಯಿಂದ ನೋಡಲಾಗುತ್ತಿದೆ ಎನ್ನುವ ಅಳಲಿಗೆ ಉತ್ತರ ಕಂಡುಕೊಳ್ಳುವುದು ಚಿತ್ರೋದ್ಯಮಕ್ಕೆ ಸಾಧ್ಯವಾಗಿಲ್ಲ. ಇನ್ನೊಂದೆಡೆ ಏಕಪರದೆಯ ಚಿತ್ರಗಳ ಸಂಖ್ಯೆ ನಿರಂತರವಾಗಿ ಕಡಿಮೆಯಾಗುತ್ತಿವೆ. ವಿಜಯ್ ಕುಮಾರ್ ನಟನೆ–ನಿರ್ದೇಶನದ 'ಭೀಮ' ಸಿನಿಮಾ ಸಿಂಗಲ್ ಸ್ಕ್ರೀನ್ ಥಿಯೇಟರ್‌ಗಳ ಮಹತ್ವವನ್ನು ಮತ್ತೆ ಮುನ್ನೆಲೆಗೆ ತಂದಿದೆ. ಮಾಸ್ ಸಿನಿಮಾಗಳ ಗೆಲುವಿನಲ್ಲಿ ಮಲ್ಟಿಪ್ಲೆಕ್ಸ್‌ಗಳ ಪಾತ್ರ ನಗಣ್ಯ ಎನ್ನುವುದನ್ನು 'ಭೀಮ' ಚಿತ್ರದ ಯಶಸ್ಸು ನೆನಪಿಸುವಂತಿದೆ.

ಎರಡು ಮೂರು ದಶಕಗಳ ಹಿಂದೆ ರಾಜ್ಯದಲ್ಲಿ ಸಾವಿರಕ್ಕೂ ಹೆಚ್ಚು ಚಿತ್ರಮಂದಿರಗಳಿದ್ದವು. ಅವುಗಳಲ್ಲಿ ಬಹುತೇಕ ಈಗ ವಾಣಿಜ್ಯ ಸಂಕೀರ್ಣಗಳು ಇಲ್ಲವೇ ಕಲ್ಯಾಣಮಂಟಪಗಳಾಗಿ ರೂಪಾಂತರ ಹೊಂದಿವೆ. ಬೆಂಗಳೂರಿನ ಉದಾಹರಣೆಯನ್ನೇ ನೋಡಿ: ಸೆಂಟ್ರಲ್, ಹಿಮಾಲಯ, ಸಂಗಮ್, ಕೆಂಪೇಗೌಡ, ಕಲ್ಪನಾ, ಗೀತಾಂಜಲಿ, ನಂದ, ಪುಟ್ಟಣ್ಣ, ಕಪಾಲಿ, ಸಾಗರ್... ಹೀಗೆ ಪ್ರಮುಖ ಚಿತ್ರಮಂದಿರಗಳು ಇತಿಹಾಸದ ಪುಟ ಸೇರಿವೆ. ಈ ಸಾಲಿಗೆ 'ಕಾವೇರಿ' ಇತ್ತೀಚೆಗಷ್ಟೇ ಸೇರಿದೆ.

ವೃತ್ತಿಪರತೆಯ ಕೊರತೆ ಕನ್ನಡ ಚಿತ್ರರಂಗವನ್ನು ಕಾಡುತ್ತಿರುವ ಮತ್ತೊಂದು ಸಮಸ್ಯೆ. ದಶಕಗಳಿಂದ ಸಿನಿಮಾ ನಿರ್ಮಾಣದಲ್ಲಿ ತೊಡಗಿಕೊಂಡಿದ್ದ ನಿರ್ಮಾಣ ಸಂಸ್ಥೆಗಳು ಮುಚ್ಚಿಹೋಗಿವೆ ಇಲ್ಲವೇ ನಿಷ್ಕ್ರಿಯವಾಗಿವೆ. ಅವುಗಳ ಜಾಗವನ್ನು ತುಂಬುವುದು ಹೊಸ ನಿರ್ಮಾಣ ಸಂಸ್ಥೆಗಳಿಗೆ ಸಾಧ್ಯವಾಗಿಲ್ಲ.

'ಕೋಟಿ' ಭರವಸೆಯ ಧನಂಜಯ್



## ಹಿನ್ನಡೆ ಹಿಂದಿನ 'ಡಿಸ್‌ಕನೆಕ್ಷನ್'

ಸಿನಿಮಾಗಳು ಸೋಲಲು ಕಾರಣಗಳು ಹಲವಿವೆ. ಇದಕ್ಕೆ ಪರಿಹಾರವೂ ಸುಲಭವಿಲ್ಲ. ಜೊತೆಗೆ ಈ ಪರಿಹಾರ, ಬದಲಾವಣೆ ಏಕಾಏಕಿ ಸಾಧ್ಯವಾಗುವಂಥದ್ದೂ ಅಲ್ಲ. ಇದಕ್ಕೆ ದೂರಾಲೋಚನೆಯೇ ದಾರಿ.

ಈ ನಿಟ್ಟಿನಲ್ಲಿ ಆಗಬೇಕಿರುವ ಒಂದು ಮುಖ್ಯ ಕೆಲಸ ಎಂದರೆ, ಸಂಪನ್ಮೂಲಕ್ಕೂ ಪ್ರತಿಭೆಗೂ ಒಂದು ಸಂಪರ್ಕ ಸಾಧಿಸುವುದು. ಉದಾಹರಣೆಗೆ, ದೊಡ್ಡ ದೊಡ್ಡ ಬಜೆಟ್ ಸಿನಿಮಾಗಳನ್ನು ಸುಮಾರು ಮಂದಿ ಮಾಡಿದ್ದಾರೆ. ಆದರೆ ಸಿನಿಮಾ ಮಾಡಿರುವ ರೀತಿ ನೋಡಿದರೆ, ಸಿನಿಮಾ ಕುರಿತ ಮೂಲ ವ್ಯಾಕರಣವೇ ಗೊತ್ತಿಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಇದೇ ಬಜೆಟ್ ಒಬ್ಬ ಪ್ರತಿಭಾವಂತ ನಟನಿಗೋ ನಿರ್ದೇಶಕನಿಗೋ ಸಿಕ್ಕಿದರೆ, ಅದರಿಂದ ಅತ್ಯುತ್ತಮ ಉತ್ಪನ್ನವನ್ನು ನೀಡುತ್ತಿದ್ದ ಎನಿಸುತ್ತದೆ. ಸಿನಿಮಾರಂಗದ ಹಿನ್ನಡೆಗೂ ಈ 'ಡಿಸ್‌ಕನೆಕ್ಷನ್' ಒಂದು ಮುಖ್ಯ ಕಾರಣ ಎನಿಸುತ್ತಿದೆ. ಇದು ಕಡಿಮೆಯಾಗುತ್ತಾ ಬರಬೇಕು.

ಈ ವರ್ಷ ಹಿಟ್ ಸಿನಿಮಾಗಳ ಸಂಖ್ಯೆ ಕಡಿಮೆ ಇದ್ದು, ಮುಂದಿನ ವರ್ಷ ಜಾಸ್ತಿ ಸಂಖ್ಯೆಯಲ್ಲಿ ಹಿಟ್ ಆದ ತಕ್ಷಣ ಎಲ್ಲವೂ ಸರಿ ಹೋಯಿತು ಎಂದರ್ಥವಲ್ಲ. ಆರ್ಥಿಕವಾಗಿ ಯಶಸ್ವಿಯಾಗಿರುವುದನ್ನೇ ಒಂದು ಮಾನದಂಡವಾಗಿ ತೆಗೆದುಕೊಂಡರೆ ಪ್ರತಿ ವರ್ಷ ಈ ಏರಿಳಿತಗಳು ಇದ್ದೇ ಇವೆ. ಹಿಂದಿನ ತಪ್ಪುಗಳ ಫಲವೇ ಈಗ ಸಿಗುತ್ತಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇದಕ್ಕೆ ಮೂಲವಾಗಿ ಶಿಕ್ಷಣ ವ್ಯವಸ್ಥೆಯಲ್ಲೂ ಬದಲಾವಣೆ ಮುಖ್ಯ. ಹೈಸ್ಕೂಲ್ ಆದ ನಂತರ 'ಫಿಲ್ಮ್ ಅಪ್ರಿಸಿಯೇಷನ್' ಕೂಡ ಮಕ್ಕಳಿಗೆ ಸರ್ಕಾರದ ಕಡೆಯಿಂದ ಇರಬೇಕು. ಇವೆಲ್ಲ ದೀರ್ಘಾವಧಿಯ ಆಲೋಚನೆಗಳು.

ಥಿಯೇಟರಿನಲ್ಲಿಯೇ ಸಿನಿಮಾ ಯಶಸ್ಸು ಕಾಣಬೇಕು ಎಂದಿದ್ದರೆ 'ಥಿಯೇಟರಿಕಲ್ ಎಕ್ಸ್‌ಪೀರಿಯೆನ್ಸ್' ಕೂಡ ಆಶಾದಾಯಕವಾಗಿರಬೇಕು. ಆದರೆ ನಾನು ಥಿಯೇಟರಿಕಲ್ ಎನ್ನುವುದನ್ನು ಇಷ್ಟಪಟ್ಟವನೇ ಅಲ್ಲ. ಸಿನಿಮಾ ಥಿಯೇಟರ್‌ನಲ್ಲಿಯೇ ಯಶಸ್ಸು ಪಡೆಯಬೇಕು ಎಂದು ನನ್ನ ಮನಸ್ಸಿನಲ್ಲಿ ಯಾವತ್ತೂ ಇಲ್ಲ.

–ಪೃಥ್ವಿ ಕೊಣನೂರು
ನಿರ್ದೇಶಕ